ದಿನಾಂಕ 17.07.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ **ಮುಖ್ಯ ವಿಚಾರಣೆಃ-** ಪ್ರತಿವಾದಿ ಪರ ಶ್ರೀ. ಸಿ.ಎನ್.ಎಂ ವಕೀಲ **ರಿಂದ**

ನಾನು ದಾಖಲೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನನ್ನ ಪರ ನಿಶಾನೆಗಳನ್ನಾಗಿ ಗುರುತಿಸಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

1. ದಿನಾಂಕ 10.01.1990 ರ ನೋಂದಾಯಿತವಲ್ಲದ ಪಂಚಾಯ್ತು ಪಾಲುಪಟ್ಟಿಯನ್ನು ಹಾಜರುಪಡಿಸಿದ್ದು (ದಿನಾಂಕ 17.07.2026 ರಂದು ಪ್ರತಿವಾದಿಯು ರೂ. 55,677/- ರೂಪಾಯಿಗಳನ್ನು ಮುದ್ರಾಂಕ ಶುಲ್ಕ ಮತ್ತು ದಂಡವಾಗಿ ಪಾವತಿ ಮಾಡಿರುತ್ತಾರೆ.) ಅದನ್ನು ನಿಡಿ 13 ಎಂದು ಗುರುತಿಸಲಾಯಿತು. ಸದರಿ ಪತ್ರಕ್ಕೆ ನಾನು ಸಹಿ ಮಾಡಿರುತ್ತೇನೆ. ಸದರಿ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಡಿ13 ಎ ಎಂದು, 2 ನೇ ವಾದಿಯ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಡಿ 13 ಬಿ ಎಂದು ಗುರುತಿಸಲಾಯಿತು. ನಿಡಿ 13 ಕ್ಕೆ ಮೃತ 1 ನೇ ವಾದಿ ಮತ್ತು 3 ನೇ ವಾದಿಯು ತಮ್ಮ ಹೆಬ್ಬೆಟ್ಟಿನ ಸಹಿ ಮಾಡಿರುತ್ತಾರೆ. ಆ ಸಮಯದಲ್ಲಿ ಸಾಕ್ಷಿದಾರರಾಗಿ ರಾಮಚಂದ್ರ, ಹೆಚ್ ಟಿ ಕುಮಾರ್, ನಾಗರಾಜು, ಸೀತಾರಾಮು, ಹೆಚ್ ಸಿ ಯೋಗೇಶ್ ಎಂಬುವವರು ಇದ್ದು ಸಹಿ ಮಾಡಿರುತ್ತಾರೆ.

ಈ ಎಲ್ಲಾ ಕಾರಣಗಳಿಗಾಗಿ ವಾದಿ ಸಲ್ಲಿಸಿರುವ ದಾವೆಯನ್ನು ವಜಾ ಮಾಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಪಾಟೀ ಸವಾಲುಃ ವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲು ಮಾಡಲು ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಸಾಕ್ಷಿಗೆ ಓದಿ ಹೇಳಿ ಕೇಳಿ ಸರಿ ಇದೆ.

(ದೇವರಾಜು ಹೆಚ್.ಆರ್)
C/C 1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ಕೆ.ಆರ್.ಪೇಟೆ.